# ನೀರು ಸಂರಕ್ಷಣೆ:ವೈರಿ ಪಡೆಯ ಡ್ರೋಣ್‌ಗೆ ನಿರ್ಬಂಧ ಪ್ರಾತ್ಯಕ್ಷಿಕೆ

# ಗಮನ ಸೆಳೆದ ಸಿಎಂಆರ್‌ಟಿಐ ವಿದ್ಯಾರ್ಥಿಗಳು

ಬೆಂಗಳೂರು, ಜ.16- ನಗರದ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹಲವು ತಂತ್ರಜ್ಞಾನಗಳನ್ನು ಅನ್ವೇಷಣೆ ಮಾಡುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ.

ಶೌಚಾಲಯಂಗಳಲ್ಲಿ ನೀರಿನ ದುಂದು ವೆಚ್ಚದಿಂದ ಅಪಾರ ಪ್ರಮಾಣದ ನೀರು ಪೋಲಾಗುವುದನ್ನು ತಪ್ಪಿಸಲು ಸಿಎಂಆರ್ ತಾಂತ್ರಿಕ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ನೂತನ ವಿಧಾನದಿಂದ ಪರಿಷ್ಕರಿಸಿ ನೀರು ಮರು ಬಳಕೆಗೆ ಸೂಕ್ತ ಎಂಬುದನ್ನು ಆವಿಷ್ಕಾರದ ಮೂಲಕ ನಿರೂಪಿಸಿದ್ದಾರೆ.

ಮೂರನೇ ವರ್ಷದ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಾದ ಸಂಜನಾ, ಆದಿತ್ಯ, ಪ್ರೈಯಶ್, ಗಿರೀಶ್, ರಾಹುಲ್, ಆಯುಷ್ ಶೌಚಾಲಯಗಳ ತ್ಯಾಜ್ಯ ನೀರಿನ ಸಂಸ್ಕರಣಾ ತಂತ್ರಜ್ಞಾನವನ್ನು ರೂಪಿಸಿದ್ದು ಈ ತಂತ್ರಜ್ಞಾನದ ವಿವರಗಳನ್ನು ತಿಳಿಸಿದರು. ಈ ತಂತ್ರಜ್ಞಾನವನ್ನು ಆಸ್ಪತ್ರೆ, ಕಾರ್ಖಾನೆ, ಹೋಟೆಲ್‌ಗಳಲ್ಲಿ ಅಳವಡಿಸಿಕೊಂಡು



ನೀರನ್ನು ಸಂರಕ್ಷಿಸಬಹುದೆಂದು ತಿಳಿಸಿದರು.

ಇದೇ ವೇಳೆ ರಕ್ಷಣಾ ರಂಗದಲ್ಲಿ ಅತ್ಯುಪಯುಕ್ತವಾದ ಡ್ರೋಣ್‌ಗಳನ್ನು ಮಾಹಿತಿ ರವಾನೆಗೆ ಬಳಸಬಹುದು. ಗಡಿಯಾಚೆಯಿಂದ ಬರುವ ಡ್ರೋಣ್‌ಗಳನ್ನು ನಿರುಪಯುಕ್ತಗೊಳಿಸುವ ಯಶಸ್ವಿ ಪ್ರಯೋಗಗಳನ್ನು ಮೂರನೆ ವರ್ಷದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ವಿದ್ಯಾರ್ಥಿಗಳಾದ ವರ್ಷ ಬಿ, ನಿರಂಜನ್, ಅಕ್ಷಯ್ ಕೆ, ಅನುಪ್, ಸಾಯಿ ಪ್ರಸಾದ್, ವಿಕಾಸ್ ಪ್ರದರ್ಶಿಸಿದ ಪ್ರಾತ್ಯಕ್ಷಿಕೆ ಎಲ್ಲರ ಗಮನ ಸೆಳೆಯಿತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಸಂಜಯ್ ಜೈನ್ ಮಾತನಾಡಿ, ಪ್ರಾಧ್ಯಾಪಕರುಗಳು ವಿದ್ಯಾರ್ಥಿ ಗಳ ಅನ್ವೇಷಣಾ ತಂತ್ರಜ್ಞಾನ ವನ್ನು ಶ್ಲಾಘಿಸಿದರು.

ಜೊತೆಗೆ ಈ ಯೋಜನೆಗಳನ್ನು ರಾಷ್ಟ್ರ ಮಟ್ಟದಲ್ಲಿ ಪರಿಶೀಲನೆಗಾಗಿ ಆಯ್ಕೆ ಮಾಡುತ್ತೇವೆ ಎಂದು ತಿಳಿಸಿದರು. ಇನ್ನು ವಿದ್ಯಾರ್ಥಿಗಳ ಅನ್ವೇಷಣಾ ತಂತ್ರಜ್ಞಾನ ಪ್ರದರ್ಶನವನ್ನು ಪ್ರಾಧ್ಯಾಪಕಿ ಡಾ.ಶರ್ಮಿಳಾ ಸಂಯೋಜನೆ ಮಾಡಿದ್ದರು.